"ಹತ್ತು ನಿಮಿಷ ಪೈಲ್ವಾನ್..." ಎಂದರು ನರಸಿಂಹರೆಡ್ಡಿ. ಆತ ನನ್ನ ಪಕ್ಕದ ಸಿಂಗಲ್ ಸೀಟರ್ ಸೋಫಾದಲ್ಲಿ ಕುಳಿತಿದ್ದ. ನನಗೆ ಆ ವ್ಯಕ್ತಿಯನ್ನು ಪರಿಚಯಿಸಿದ್ದರು.

"ಮಿಸ್ಟರ್ ಶರ್ಮಾ, ಇವರು ಮಹಮ್ಮದ್ ಪೈಲ್ವಾನ್ ಅಂತ. ಹೈದರಾಬಾದಿನಲ್ಲಿ ನನಗೆ ಅತ್ಯಂತ ಆತ್ಮೀಯರಲ್ಲೊಬ್ಬರು..."

"ಹಲೋ..." ಎಂದಿದ್ದೆ ನಾನು ಆತನ ಕಡೆ ನೋಡಿ. ಆತ, " ನಮಸ್ಕಾರ..." ಎಂದಿದ್ದ. ಕಣ್ಣು ತುಂಬಾ ತೀಕ್ಷ್ಣವಾಗಿದ್ದವು.

"ನೋಡೋದಕ್ಕೆ ಹೀಗೆ ಕಾಣ್ತಾರೆ ನಮ್ಮ ಪೈಲ್ವಾನ್. ಹದಿನಾಲ್ಕನೇ ವರ್ಷಕ್ಕೆ ಸೈಕಲ್ ರಿಕ್ಷಾ ತುಳಿಯಲು ಪ್ರಾರಂಭಿಸಿದವರು. ಒಂದಿಪ್ಪತ್ತು ಮರ್ಡರ್ ಆದರೂ ಮಾಡಿರಬಹುದು. ಆದರೆ ಅಮಾಯಕರ ರಕ್ತವನ್ನೆಂದೂ ನೆಲಕ್ಕೆ ಕೆಡವಿದವರಲ್ಲ. ಹೈದರಾಬಾದ್ ಓಲ್ಡ್ ಸಿಟಿಯಲ್ಲಿ ಪೈಲ್ವಾನ್ ಹೆಸರು ಕೇಳಿದರೆ ಎಂಥವರಿಗೂ ಎದೆ ನಡುಗುತ್ತದೆ. ಆದರೆ ಬಡವರಿಗೆ ಹತ್ತಿರದ ಬಂಧುವಿನಂತೆ ನೆರವಿಗೆ ಬರುತ್ತಾರೆ. ಎಷ್ಟು ಬಡವರ ಮದುವೆಗಳನ್ನು ಮಾಡಿರುವರೋ, ಎಷ್ಟು ಬಡ ವಿದ್ಯಾರ್ಥಿಗಳನ್ನು ಓದಿಸಿದ್ದಾರೋ ದೇವರಿಗೆ ಮಾತ್ರ ಗೊತ್ತು. ನಮ್ಮ ಪೈಲ್ವಾನಿಗೆ ಜಾತಿ, ಮತ, ಧರ್ಮದ ಸೋಂಕು ಸಾಸಿವೆ ಕಾಳಿನಷ್ಟೂ ಇಲ್ಲ. ಪೈಲ್ವಾನ್ ಸೆಟ್ಲ್ ಮಾಡಿರುವ ವ್ಯಾಜ್ಯಗಳಿಗಂತೂ ಲೆಕ್ಕವೇ ಇಲ್ಲ. ಎಷ್ಟೋ ಜನ ಮಿನಿಸ್ಟರುಗಳು, ಎಂಪಿಗಳು ಪೈಲ್ವಾನ್ ಸಹಾಯ ಪಡೆದುಕೊಂಡಿದ್ದಾರೆ. ಮೂರ್ನಾಲ್ಕು ವರ್ಷಗಳಿಂದ ಪೈಲ್ವಾನ್ ಅಂಥ ಕೆಲಸಗಳನ್ನು ಕಡಿಮೆ ಮಾಡಿಕೊಂಡಿದ್ದಾರೆ. ಇಂದಿನ ಸಿ.ಎಂ. ಕೂಡಾ ನಮ್ಮ ಪೈಲ್ವಾನ್ ಮನೆಯ ಬಾಗಿಲು ತಟ್ಟಿದವರೆ. ಈ ಎಂಟು ವರ್ಷಗಳ ಹಿಂದೆ ಯಾವುದೋ ಕೇಸ್‌ನಲ್ಲಿ ಅರೆಸ್ಟ್ ವಾರೆಂಟ್ ಬಂದಾಗ ಪೈಲ್ವಾನ್ ನಮ್ಮ ಚೆರ್ಲಪಲ್ಲಿ ಮನೆಯಲ್ಲಿ ಒಂದು ತಿಂಗಳ ಕಾಲ ಉಳಿದುಕೊಂಡಿದ್ದರು. ಜಿಲ್ಲಾ ಎಸ್ಪಿ ಮೂರು ಸಾರಿ ಹತ್ತನ್ನೆರಡು ಪೊಲೀಸ್ ಸಿಬ್ಬಂದಿಯೊಂದಿಗೆ ಇಡೀ ಮನೆಯನ್ನು ತಲಾಶು ಮಾಡಿದರೂ ಪೈಲ್ವಾನ್‌ರನ್ನು ಹಿಡಿದುಕೊಳ್ಳಲಾಗಲಿಲ್ಲ. ಅಂದಂಗೆ ನಮ್ಮ ಪೈಲ್ವಾನ್ ಏಳನೇ ಕ್ಲಾಸ್ ಫೇಲು. ನನ್ನದು ಬಿ.ಎ. ಫಸ್ಟ್ ಕ್ಲಾಸ್. ಆದರೂ ನಮ್ಮ ಮಧ್ಯೆ ಅದೇನು ದೊಡ್ಡ ವಿಷ್ಯಾನೇ ಅಲ್ಲ. ಕ್ರಿಮಿನಲ್ ಲಾಯರುಗಳೂ ಪೈಲ್ವಾನ್ ಮುಂದೆ ಏನೇನೂ ಅಲ್ಲ. ಪೈಲ್ವಾನ್ ಅಣ್ಣನ ಮಗ ಕರೀಂ ಖಾನ್ ಹೈದರಾಬಾದಿನಲ್ಲಿ ದೊಡ್ಡ ಕ್ರಿಮಿನಲ್ ಲಾಯರ್. ಅವ್ನೇ ಕೆಲವು ಪಾಯಿಂಟುಗಳನ್ನ ಇವರತ್ರ ತಗೋತಾನೆ..." ನರಸಿಂಹರೆಡ್ಡಿ ಬೆಳ್ಳಿ ಲೋಟವನ್ನು ಬಾಯಿಗಿಟ್ಟುಕೊಂಡು ಜಾಲಿ ಮೂಡಿನಲ್ಲಿ ಹೇಳಿದ್ದರು.

"ಅದು ಮನೆಯಲ್ಲ ದೇವಸ್ಥಾನ..." ಅಭಿಮಾನ ತುಂಬಿಕೊಂಡು ಮಾತು ಹೊರಡಿಸಿದ್ದರು ಮಹಮ್ಮದ್ ಪೈಲ್ವಾನ್.

"ಚಾರ್ಮಿನಾರ್ ಸುತ್ತ ಮುತ್ತ ಎರಡು ಕಿಲೋಮೀಟರ್ ಪೈಲ್ವಾನ್ದೆ ಕುಟುಂಬ. ಅಲ್ಲಿ ಚೀಫ್ ಮಿನಿಸ್ಟರ್ ಮಾತೂ ನಡ್ಯಲ್ಲ, ಪೊಲೀಸ್ ಕಮಿಷನರ್ ಮಾತೂ ನಡ್ಯಲ್ಲ. ಹಾಗಂತ ಪೈಲ್ವಾನ್ ಯಾವೊತ್ತೂ ಅನ್ಯಾಯಕ್ಕೆ ಸಪೋರ್ಟ್ ಮಾಡೋರಲ್ಲ. ಆದ್ದರಿಂದಲೇ ಇವೊತ್ತಿಗೂ ಕಬ್ಬಿಣದಂತೆ ಗಟ್ಟಿಯಾಗಿದ್ದಾರೆ..." ಅಭಿಮಾನದ ಮಾತುಗಳು.

"ಇಬ್ಬರದೂ ಒಳ್ಳೆ ಫ್ರೆಂಡ್‌ಶಿಪ್..." ನಾನು ಹೃದಯಪೂರ್ವಕವಾಗಿಯೇ ಮೆಚ್ಚಿ ಹೇಳಿದ್ದೆ.

"ನನಗೆ ಬಹಳ ಹಿಂದಿನಿಂದಲೂ ಜೂನಿಯರ್ ಎನ್ಟಿಆರ್‌ನ ಹಾಕ್ಕೊಂಡು ಒಂದು ಒಳ್ಳೆ ಸಿನಿಮಾ ಮಾಡ್ಬೇಕು ಅನ್ನೊ ಆಸೆ, ನಮ್ಮ ಫ್ಯಾಮಿಲೀದು. ನಮ್ಮ ಮುತ್ತಾತ ಒಬ್ಬ ಇದ್ದರಂತೆ. ತುಂಬಾ ಒಳ್ಳೆಯವನಂತೆ. ಆದರೆ ಆತನ ಮಾತಿಗೆ ಯಾರಾದರೂ ತಿರುಗಿಬಿದ್ದರೆ ಮಾತ್ರ ಸಹಿಸಿಕೊಳ್ಳುತ್ತಿರಲಿಲ್ಲವಂತೆ. ಆತನ ವಿರುದ್ಧ ಮಸಲತ್ತು ಮಾಡಿದವರನ್ನು ಯಾವೊತ್ತೂ